# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\2473\2015\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 16/04/2019

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** ಸರ್ಕಾರಿ ನೌಕರರಾದ ಮೈಸೂರು ಜಿಲ್ಲೆ ಮೈಸೂರು ವಿಭಾಗದ 1)ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದ ಶ್ರೀ.ಬಿ.ಬಸವರಾಜು [ಪ್ರಸ್ತುತ ನಿವೃತ್ತ] ಹಾಗೂ ವಲಯ ಅರಣ್ಯಾಧಿಕಾರಿಗಳಾಗಿದ್ದ 2)ಶ್ರೀ.ಎ.ವಿ.ಸತೀಶ್ ಮತ್ತು 3) ಶ್ರೀ.ಹೆಚ್.ಕೆ.ಪುಟ್ಟರಾಜು [ಪ್ರಸ್ತುತ ನಿವೃತ್ತ] ರವರ ಕರ್ತವ್ಯ ಲೋಪದ ಬಗ್ಗೆ.

***********

ಮೈಸೂರು ಜಿಲ್ಲೆ ಮೈಸೂರು ನಗರ ಅಶೋಕಪುರಂ 7ನೇ ಕ್ರಾಸ್ ಸಿ.ಹೆಚ್.12 #1629ಗ ನಿವಾಸಿಯಾದ ಶ್ರೀ.ಎಂ.ಮಹದೇವಯ್ಯ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಮೈಸೂರು ಜಿಲ್ಲೆ ಮೈಸೂರು ವಿಭಾಗದ 1)ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದ ಶ್ರೀ.ಬಿ.ಬಸವರಾಜು [ಪ್ರಸ್ತುತ ನಿವೃತ್ತ] ಹಾಗೂ ವಲಯ ಅರಣ್ಯಾಧಿಕಾರಿಗಳಾಗಿದ್ದ 2)ಶ್ರೀ.ಎ.ವಿ.ಸತೀಶ್ ಮತ್ತು 3) ಶ್ರೀ.ಹೆಚ್.ಕೆ.ಪುಟ್ಟರಾಜು [ಪ್ರಸ್ತುತ ನಿವೃತ್ತ] (ಇನ್ನು ಮುಂದೆ ಕ್ರಮವಾಗಿ, '1 ರಿಂದ 3ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

1) ಮೈಸೂರು ವಲಯ ಮಾದಳ್ಳಿ ಶಾಖೆಯಲ್ಲಿ 100 ಹೆಕ್ಟೇರ್‌ಗಳಲ್ಲಿ ಗುಂಡಿ ತೆಗೆಸಿ ಪ್ಲಾಟ್ ಮಾಡಲು ಮತ್ತು ತಂತಿ ಬೇಲಿ ಹಾಕಲು ಸುಮಾರು ₹2,12,00,000/- ವೆಚ್ಚದಲ್ಲಿ ಮಾಡಿದ ಕಾಮಗಾರಿ ಸಂಪೂರ್ಣ ಕಳಪೆಯಾಗಿದೆ;
2) ನಗರ ಹಸರೀಕರಣ, ಚಾಮುಂಡಿ ಬೆಟ್ಟ ದೇವಿ ವನದಲ್ಲಿ ಮರಗಿಡಗಳನ್ನು ಕಡಿದು ಮಾರಾಟ ಮಾಡಿ, ಲಕ್ಷಾಂತರ ರೂಪಾಯಿಗಳ ಅವ್ಯವಹಾರ ಮಾಡಿದ್ದಾರೆ;

3) ವಲಯ ಅರಣ್ಯ ಕಛೇರಿ ಪಕ್ಕದಲ್ಲಿ ಶೌಚಾಲಯ ನಿರ್ಮಾಣ ಮಾಡಿದೆಯೆಂದು ಹಣ ಡ್ರಾ ಮಾಡಿದ್ದಾರೆ;
4) ಅರಣ್ಯ ಭವನ ಮುಂದೆ ಕಾಂಪೌಂಡ್ ನಿರ್ಮಾಣ ಮಾಡುವ ಸಲುವಾಗಿ ಕೆಡವಿರುವ ಹಳೇ ಕಾಂಪೌಂಡ್ ಗೋಡೆಯ ಸೈಜ್ ಕಲ್ಲುಗಳು ಮತ್ತು ಚಪ್ಪಡಿ ಕಲ್ಲುಗಳನ್ನು ಹರಾಜು ಮಾಡದೇ ಮಾರಾಟ ಮಾಡಿದ್ದಾರೆ;
5) ಕೆಟ್ಟು ನಿಂತಿರುವ ವಾಹನಗಳಿಗೆ ಸಾರಿಗೆ ಇಲಾಖೆಯಿಂದ ದೃಢೀಕರಣ ಪತ್ರ ಪಡೆಯದೇ, ರಿಪೇರಿ ಮಾಡುವುದಾಗಿ ಹೇಳಿ, ಲಕ್ಷಾಂತರ ರೂಪಾಯಿ ಡ್ರಾ ಮಾಡಿ ದುರುಪಯೋಗ ಪಡಿಸಿಕೊಂಡಿದ್ದಾರೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ದೂರಿನಲ್ಲಿ ಹೇಳಿದ ಚೈನ್‌ಲಿಂಕ್ ಮೆಷ್ ಬೇಲಿ ನಿರ್ಮಾಣ ಕಾಮಗಾರಿಯು ಮೈಸೂರು ವಲಯದ ಮಾದಳ್ಳಿ ಶಾಖೆಯ ಚಿಕ್ಕನಹಳ್ಳಿ ಮನ್ನಾ ಜಂಗಲ್‌ನ ಅರಸನಕೆರೆ ಬ್ಲಾಕ್–1 ಮತ್ತು 2ಕ್ಕೆ ಸಂಬಂಧಿಸಿದ್ದು, ಸದರಿ ವಲಯವು 3ನೇ ಎದುರುದಾರರ ಕಾರ್ಯ ವ್ಯಾಪ್ತಿಗೊಳಪಡುತ್ತದೆ. ಅರಸನಕೆರೆ ಅರಣ್ಯ ಪ್ರದೇಶವನ್ನು ಅಕ್ರಮ ಒತ್ತುವರಿಯಿಂದ ಸಂರಕ್ಷಣೆ ಮಾಡುವ ದೃಷ್ಟಿಯಿಂದ ಸದರಿ ಬೇಲಿ ನಿರ್ಮಾಣ ಕಾಮಗಾರಿಯನ್ನು ಮಾಡಿದ್ದು, ಸದರಿ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಶ್ರೀ.ವಿಜಯೇಂದ್ರ ಮೂರ್ತಿ ರವರಿಗೆ ₹1,44,69,696/–ಕ್ಕೆ ವಹಿಸಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮೈಸೂರು ವಿಭಾಗ ರವರು ಕಾರ್ಯಾದೇಶ ನೀಡಿದ್ದಾರೆ. ಮುಂದುವರೆದು, 95 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಮುಂಗಡ ಕಾಮಗಾರಿ ನಿರ್ವಹಿಸಲು ಮತ್ತು ನೆಡುತೋಪು ನಿರ್ಮಾಣ ಮಾಡಲು ಟೆಂಡರ್ ಕರೆದು ಶ್ರೀ.ಎಂ.ವೈ.ಸುರೇಶ್ ಮತ್ತು ಶ್ರೀ.ಎಂ.ಎಸ್.ಸ್ವಾಮಿರಾಜ್ ರವರಿಗೆ ವಹಿಸಿದೆ. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾದ ತಮಗೆ ಸರ್ಕಾರದಿಂದ ಅನುದಾನ ಬಿಡುಗಡೆಯಾಗುವುದಿಲ್ಲ ಮತ್ತು ತಾವು ಬಟಾವಾಡೆ ಅಧಿಕಾರಿಯು ಅಲ್ಲ. ದೇವಿ ವನ ನಿರ್ಮಾಣ ಕಾರ್ಯ ಮತ್ತು ಶೌಚಾಲಯ ನಿರ್ಮಾಣ ಕಾಮಗಾರಿಯು ತಮ್ಮ ಕಾರ್ಯಾವಧಿಯಲ್ಲಿ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

4. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ಮೈಸೂರು ಅರಣ್ಯ ವಿಭಾಗದ ನಗರ ಹಸರೀಕರಣ ವಲಯದಲ್ಲಿ ದಿನಾಂಕ:16/10/14 ರಿಂದ 10/09/15ರವರೆಗೆ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದು, ದೂರುದಾರರು ಆರೋಪಿಸಿರುವ ಕಾಮಗಾರಿ ನಗರ ಹಸರೀಕರಣ ವಲಯ ವ್ಯಾಪ್ತಿಗೆ ಬಾರದೇ ಇರುವುದರಿಂದ ಹಾಗೂ ತಮ್ಮ ಅವಧಿಯಲ್ಲಿ ಸದರಿ ಕಾಮಗಾರಿಯನ್ನು ಕೈಗೊಳ್ಳದಿರುವುದರಿಂದ, ದೂರಿನ ಆರೋಪಗಳು ತಮಗೆ ಸಂಬಂಧಿಸಿಲ್ಲವೆಂದು ಹೇಳಿದ್ದಾರೆ.

MYS/2473/15



5. ಮೂರನೇ (3ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, 1ನೇ ಎದುರುದಾರರ ಆಕ್ಷೇಪಣೆಯ ಅಂಶಗಳನ್ನೇ ಪುನರುಚ್ಛರಿಸಿದ್ದಾರೆ.

6. ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ಸದರಿಯವರು ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ದೂರಿನಲ್ಲಿ ಹೇಳಿದ ಕಾಮಗಾರಿಗಳ ಪೈಕಿ, ಈ ಕೆಳಗಿನ ಕಾಮಗಾರಿಗಳ ದಾಖಲೆಗಳು ಲಭ್ಯವಿದೆ –

   i. ಮೈಸೂರು ವಿಭಾಗದ ವಿವಿಧ ವಲಯಗಳಲ್ಲಿ 2014–15ನೇ ಸಾಲಿನಲ್ಲಿ ನೆಡುತೋಪು ನಿರ್ಮಾಣಕ್ಕೆ ಮುಂಗಡ ಕಾಮಗಾರಿಗಳ ದಿನಾಂಕ:25/09/14ರ ಟೆಂಡರ್ ಪ್ರಕಟಣೆ ಮತ್ತು ಟೆಂಡರ್ ಅಂಗೀಕರಿಸಿದ ಆದೇಶ ದಿನಾಂಕ:11/12/14;

   ii. 2014–15ನೇ ಸಾಲಿನಲ್ಲಿ ಮೈಸೂರು ವಲಯದಲ್ಲಿ ಅರಸನಕೆರೆ ಪ್ರದೇಶದಲ್ಲಿ (ಟ್ರೀ ಪಾರ್ಕ್ ಮಾದರಿ) ನೆಡುತೋಪು ನಿರ್ಮಿಸಲು ಚೈನ್ ಲಿಂಕ್ ಬೇಲಿ ನಿರ್ಮಾಣ ಬ್ಲಾಕ್–II – 2.45 ಕಿಲೋಮೀಟರ್ಸ್ ಕಾಮಗಾರಿಯ ಅಂದಾಜು ಪಟ್ಟಿ (ಅಂದಾಜು ₹96.46ಲಕ್ಷ), ಶ್ರೀ.ವಿಜಯೇಂದ್ರ ಮೂರ್ತಿ, ಗುತ್ತಿಗೆದಾರರಿಗೆ ಸದರಿ ಕಾಮಗಾರಿ ಮತ್ತು ಚಿಕ್ಕನಹಳ್ಳಿ ಅರಣ್ಯ ಪ್ರದೇಶದಲ್ಲಿ ಚೈನ್ ಲಿಂಕ್ ಬೇಲಿ ನಿರ್ಮಾಣ ಬ್ಲಾಕ್–I – 2.45 ಕಿಲೋಮೀಟರ್ಸ್ (ಅಂದಾಜು ₹96.46ಲಕ್ಷ) ಕಾಮಗಾರಿಯ ಕಾರ್ಯಾದೇಶ ಮತ್ತು ಗುತ್ತಿಗೆ ಕರಾರು ದಿನಾಂಕ:13/02/15. ಸದರಿ ಕಾಮಗಾರಿಯ ಅಳತೆ ಪುಸ್ತಕ ಸಂಖ್ಯೆ–7969 ಪುಟ ಸಂಖ್ಯೆ–25 ರಿಂದ 35;

   iii. ಮೈಸೂರು ಜಿಯುಪಿ ವಲಯ ಕುಕ್ಕರಹಳ್ಳಿ ಕೆರೆ ಹೈಟೆಕ್ ನರ್ಸರಿಯ ಅಭಿವೃದ್ಧಿಯ 2014–15ನೇ ಸಾಲಿನ ಅಂದಾಜು ಪಟ್ಟಿ, ಅಳತೆ ಪುಸ್ತಕ ಸಂಖ್ಯೆ–2519/14–15 ಪುಟ ಸಂಖ್ಯೆ–10 ರಿಂದ 12;

   iv. ಮೈಸೂರು ಜಿಯುಪಿ ವಲಯ ಕುಕ್ಕರಹಳ್ಳಿ ಕೆರೆ ಅರಣ್ಯ ನರ್ಸರಿಯಲ್ಲಿ ವಿಶ್ರಾಂತಿ ಗೃಹ ನಿರ್ಮಾಣ 2014–15ನೇ ಸಾಲಿನ ಅಂದಾಜು ಪಟ್ಟಿ, ಅಳತೆ ಪುಸ್ತಕ ಸಂಖ್ಯೆ–2519/14–15 ಪುಟ ಸಂಖ್ಯೆ–2 ರಿಂದ 9;

   v. ಮೈಸೂರು ಜಿಯುಪಿ ವಲಯ ಕುಕ್ಕರಹಳ್ಳಿ ಕೆರೆ ಅರಣ್ಯ ನರ್ಸರಿಯಲ್ಲಿ ಕಾಂಪೋಸ್ಟ್ ಟ್ಯಾಂಕ್ ನಿರ್ಮಾಣ 2014–15ನೇ ಸಾಲಿನ ಅಂದಾಜು ಪಟ್ಟಿ, ಅಳತೆ ಪುಸ್ತಕ ಸಂಖ್ಯೆ–2519/14–15 ಪುಟ ಸಂಖ್ಯೆ–13 ಮತ್ತು 14, ಮತ್ತಿತರ ದಾಖಲೆಗಳು.

2) ಹಿಂದಿನ ಖಂಡಿಕೆ–7(1)ರ ಕ್ರಮ ಸಂಖ್ಯೆ–i ಕಾಮಗಾರಿಗಳಿಗೆ ಸಂಬಂಧಪಟ್ಟ ಕಾಮಗಾರಿ ನಿರ್ವಹಣೆ ಮಾಡಿದ ದಾಖಲೆಗಳಿಲ್ಲ. ಆದರೆ, ಸದರಿ ಕಾಮಗಾರಿಗಳನ್ನು ಶ್ರೀ.ಎಂ.ವೈ.ಸುರೇಶ್, ಶ್ರೀ.ಹೆಚ್.ಕೆ.ರಾಜು

ಮತ್ತು ಶ್ರೀ.ಎಂ.ಎನ್.ಸ್ವಾಮಿರಾಜ್ ರವರಿಗೆ ವಹಿಸಿದ ಕಾರ್ಯಾದೇಶ ಮಾತ್ರ ಇದೆ. ಸದರಿ ಕಾಮಗಾರಿಗಳಿಗೆ ಒಟ್ಟು ₹25,19,899/-ಗಳನ್ನು ಖರ್ಚು ಮಾಡಿರುವುದು ದಿನಾಂಕ:25/06/15ರ ದಾಖಲೆಯಲ್ಲಿ ಕಂಡು ಬಂದಿದೆ;

3) ಹಿಂದಿನ ಖಂಡಿಕೆ-7(1)ರ ಕ್ರಮ ಸಂಖ್ಯೆ-ii ಕಾಮಗಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ಶ್ರೀ.ವಿಜಯೇಂದ್ರ ಮೂರ್ತಿ, ಗುತ್ತಿಗೆದಾರರಿಗೆ ₹1,44,69,696/- ಗಳಿಗೆ ದಿನಾಂಕ:13/02/15ರಂದು ವಹಿಸಿದೆ. ಚೈನ್ ಲಿಂಕ್ ಬೇಲಿ ನಿರ್ಮಾಣ ಕಾಮಗಾರಿಯ ಅಂದಾಜು ಪಟ್ಟಿಯಲ್ಲಿ ಈ ಕೆಳಗಿನ ಅಂಶಗಳನ್ನು ಅಳವಡಿಸಿದೆ –

ಅ) ತಳಪಾಯದ ಮಣ್ಣಿನ ಅಗೆತ;
ಆ) ತಳಪಾಯಕ್ಕೆ 40 ಮಿ.ಮೀ. ಕೆಳ ಗಾತ್ರದ ಜಲ್ಲಿಯ ಕಾಂಕ್ರೀಟ್ ಹಾಕುವುದು;
ಇ) ಕಲ್ಲು ಮತ್ತು ಗಾರೆಯಿಂದ ಗೋಡೆ ನಿರ್ಮಿಸುವುದು;
ಈ) ಎಂ-20, 20 ಮಿ.ಮೀ. ಕೆಳ ಗಾತ್ರದ ಜಲ್ಲಿಯ ಕಾಂಕ್ರೀಟ್ ಕಂಬಗಳನ್ನು ನೆಡುವುದು;
ಉ) ಎಂ-15, 20 ಮಿ.ಮೀ. ಕೆಳ ಗಾತ್ರದ ಜಲ್ಲಿಯ ಕಾಂಕ್ರೀಟ್‌ನಿಂದ ಗೋಡೆಯ ಮೇಲೆ ಕೋಪಿಂಗ್ ಹಾಕುವುದು;
ಊ) ಚೈನ್ ಲಿಂಕ್ ಬೇಲಿಯನ್ನು ಅಳವಡಿಸುವುದು, ಇತ್ಯಾದಿ.

ಸದರಿ ಕಾಮಗಾರಿಗೆ ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ರವರು ತಾಂತ್ರಿಕ ಮಂಜೂರಾತಿ ನೀಡಿದ್ದಾರೆ. ಸದರಿ ಕಾಮಗಾರಿಯ ಅಳತೆಯನ್ನು 3ನೇ ಎದುರುದಾರರು ದಾಖಲಿಸಿ, ಅಳತೆ ಪುಸ್ತಕದಲ್ಲಿ ಅಳತೆ ಕಾರ್ಯ ಕೈಗೊಂಡ ದಿನಾಂಕ ಮತ್ತು ಕಾಮಗಾರಿಯ ಪ್ರೀ-ಮೆಷರ್‌ಮೆಂಟನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿಲ್ಲ. ಅಂದಾಜು ಪಟ್ಟಿಯಲ್ಲಿನ ಅಂಶಗಳನ್ನೇ 3ನೇ ಎದುರುದಾರರು ಅಳತೆ ಪುಸ್ತಕದಲ್ಲಿ ದಾಖಲಿಸಿರುವುದು ಸ್ಪಷ್ಟವಾಗಿ ಕಂಡು ಬಂದಿದೆ. ಸದರಿ ಅಳತೆಯನ್ನು 1ನೇ ಎದುರುದಾರರು ಚೆಕ್ ಮೆಷರ್‌ಮೆಂಟ್ ಮಾಡಿದ್ದಾರೆ. ಸದರಿಯವರು ಚೆಕ್ ಮೆಷರ್‌ಮೆಂಟ್ ಮಾಡಿದ್ದಾರೆನ್ನುವ ಬಗ್ಗೆ "checked & found correct as in item No:..............." ಎಂದು ನಮೂದಿಸಿ, ಸಹಿ ಮಾಡಿ, ದಿನಾಂಕಗಳನ್ನು ನಮೂದಿಸಿರುವುದು ಕಂಡು ಬಂದಿದೆ. 3ನೇ ಎದುರುದಾರರು ಅಳತೆಯನ್ನು ದಾಖಲಿಸಿದ ದಿನಾಂಕವನ್ನು ಅಳತೆ ಪುಸ್ತಕದಲ್ಲಿ ನಮೂದಿಸದೇ ಇರುವುದರಿಂದ, ಸದರಿಯವರು ಕಾಮಗಾರಿಯ ಆಯಾಯ ಹಂತದಲ್ಲಿಯೇ ಅಳತೆಯನ್ನು ದಾಖಲಿಸಿದ್ದಾರೆಂದು ಹೇಳಲು ಸಾಧ್ಯವಿಲ್ಲ. ಆ ಕಾರಣಕ್ಕಾಗಿ, 1ನೇ ಎದುರುದಾರರು ನಮೂದಿಸಿದ ಚೆಕ್ ಮೆಷರ್‌ಮೆಂಟನ್ನು ನಂಬಲರ್ಹವಲ್ಲ.

4) ಹಿಂದಿನ ಖಂಡಿಕೆ-7(1)ರ ಕ್ರಮ ಸಂಖ್ಯೆ-iii ಕಾಮಗಾರಿಯ ಅಂದಾಜು ₹1,06,000/-ಗಳಾಗಿದ್ದು, ದೂರಿನ 1 ಮತ್ತು 2ನೇ ಎದುರುದಾರರು ಸದರಿ ಅಂದಾಜನ್ನು ತಯಾರಿಸಿದ್ದು, ಅದೇ ಮೊತ್ತಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮೈಸೂರು ವಿಭಾಗ ರವರು ತಾಂತ್ರಿಕ ಅನುಮೋದನೆಯನ್ನು ನೀಡಿದ್ದಾರೆ. ಸದರಿ ಕಾಮಗಾರಿಯ ಅಳತೆಯನ್ನು 2ನೇ ಎದುರುದಾರರು ದಾಖಲಿಸಿ, ಅಳತೆ ಕಾರ್ಯ ಕೈಗೊಂಡ ದಿನಾಂಕ, ಮತ್ತು ಕಾಮಗಾರಿಯ ಪ್ರೀ-ಮೆಷರ್‌ಮೆಂಟನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿಲ್ಲ.

mys/2473/15



ಅಂದಾಜು ಪಟ್ಟಿಯಲ್ಲಿನ ಅಂಶಗಳನ್ನೇ 2ನೇ ಎದುರುದಾರರು ಅಳತೆ ಪುಸ್ತಕದಲ್ಲಿ ದಾಖಲಿಸಿರುವುದು ಸ್ಪಷ್ಟವಾಗಿ ಕಂಡು ಬಂದಿದೆ. ಸದರಿ ಅಳತೆಯನ್ನು 1ನೇ ಎದುರುದಾರರು ಚೆಕ್ ಮೆಷರ್‌ಮೆಂಟ್ ಮಾಡಿದ್ದಾರೆ. ಸದರಿಯವರು ಚೆಕ್ ಮೆಷರ್‌ಮೆಂಟ್ ಮಾಡಿದ್ದಾರೆನ್ನುವ ಬಗ್ಗೆ "checked & found correct as in item No:1 to 5" ಎಂದು ನಮೂದಿಸಿ, ಸಹಿ ಮಾಡಿ, ದಿನಾಂಕವನ್ನು ನಮೂದಿಸಿರುವುದು ಕಂಡು ಬಂದಿದೆ. 2ನೇ ಎದುರುದಾರರು ಅಳತೆಯನ್ನು ದಾಖಲಿಸಿದ ದಿನಾಂಕವನ್ನು ಅಳತೆ ಪುಸ್ತಕದಲ್ಲಿ ನಮೂದಿಸದೇ ಇರುವುದರಿಂದ, ಸದರಿಯವರು ಕಾಮಗಾರಿಯ ಆಯಾಯ ಹಂತದಲ್ಲಿಯೇ ಅಳತೆಯನ್ನು ದಾಖಲಿಸಿದ್ದಾರೆಂದು ಹೇಳಲು ಸಾಧ್ಯವಿಲ್ಲ. ಆ ಕಾರಣಕ್ಕಾಗಿ, 1ನೇ ಎದುರುದಾರರು ನಮೂದಿಸಿದ ಚೆಕ್ ಮೆಷರ್‌ಮೆಂಟ್ ನಂಬಲರ್ಹವಲ್ಲ;

5) ಹಿಂದಿನ ಖಂಡಿಕೆ–7(1)ರ ಕ್ರಮ ಸಂಖ್ಯೆ–iv ಕಾಮಗಾರಿಯ ಅಂದಾಜು ₹1,10,000/–ಗಳಾಗಿದ್ದು, ದೂರಿನ 1 ಮತ್ತು 2ನೇ ಎದುರುದಾರರು ಸದರಿ ಅಂದಾಜನ್ನು ತಯಾರಿಸಿದ್ದು, ಅದೇ ಮೊತ್ತಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮೈಸೂರು ವಿಭಾಗ ರವರು ತಾಂತ್ರಿಕ ಅನುಮೋದನೆಯನ್ನು ನೀಡಿದ್ದಾರೆ. ಸದರಿ ಕಾಮಗಾರಿಯ ಅಳತೆಯನ್ನು 2ನೇ ಎದುರುದಾರರು ದಾಖಲಿಸಿ, ಅಳತೆಯನ್ನು ದಾಖಲಿಸಿದ ದಿನಾಂಕ ಮತ್ತು ಪ್ರೀ–ಮೆಷರ್‌ಮೆಂಟನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿಲ್ಲ. ಅಂದಾಜು ಪಟ್ಟಿಯಲ್ಲಿನ ಅಂಶಗಳನ್ನೇ 2ನೇ ಎದುರುದಾರರು ಅಳತೆ ಪುಸ್ತಕದಲ್ಲಿ ದಾಖಲಿಸಿರುವುದು ಸ್ಪಷ್ಟವಾಗಿ ಕಂಡು ಬಂದಿದೆ. ಅಳತೆ ಪುಸ್ತಕದ ಪುಟ ಸಂಖ್ಯೆ–4 ರಿಂದ 7 ಮತ್ತು 9ರಲ್ಲಿ ಅಳತೆಯನ್ನು ತಿದ್ದುಪಡಿ ಮಾಡಿರುವುದು ಸ್ಪಷ್ಟವಾಗಿ ಕಂಡು ಬಂದಿದ್ದು, ಸದರಿ ತಿದ್ದುಪಡಿಗಳಿಗೆ ಚಿಕ್ಕ ರುಜುಗಳಿಲ್ಲ. ಸದರಿ ಅಳತೆಯನ್ನು 1ನೇ ಎದುರುದಾರರು ಚೆಕ್ ಮೆಷರ್‌ಮೆಂಟ್ ಮಾಡಿದ್ದಾರೆ. ಸದರಿಯವರು ಚೆಕ್ ಮೆಷರ್‌ಮೆಂಟ್ ಮಾಡಿದ್ದಾರೆನ್ನುವ ಬಗ್ಗೆ "checked & found correct as in item No:1 to 18" ಎಂದು ನಮೂದಿಸಿ, ಸಹಿ ಮಾಡಿ, ದಿನಾಂಕವನ್ನು ನಮೂದಿಸಿರುವುದು ಕಂಡು ಬಂದಿದೆ. 2ನೇ ಎದುರುದಾರರು ಅಳತೆಯನ್ನು ದಾಖಲಿಸಿದ ದಿನಾಂಕವನ್ನು ಅಳತೆ ಪುಸ್ತಕದಲ್ಲಿ ನಮೂದಿಸದೇ ಇರುವುದರಿಂದ, ಸದರಿಯವರು ಕಾಮಗಾರಿಯ ಆಯಾಯ ಹಂತದಲ್ಲಿಯೇ ಅಳತೆಯನ್ನು ದಾಖಲಿಸಿದ್ದಾರೆಂದು ಹೇಳಲು ಸಾಧ್ಯವಿಲ್ಲ. ಆ ಕಾರಣಕ್ಕಾಗಿ, 1ನೇ ಎದುರುದಾರರು ನಮೂದಿಸಿದ ಚೆಕ್ ಮೆಷರ್‌ಮೆಂಟನ್ನು ನಂಬಲರ್ಹವಲ್ಲ;

6) ಹಿಂದಿನ ಖಂಡಿಕೆ–7(1)ರ ಕ್ರಮ ಸಂಖ್ಯೆ–v ಕಾಮಗಾರಿಯ ಅಂದಾಜು ₹2,28,000/–ಗಳಾಗಿದ್ದು, ದೂರಿನ 1 ಮತ್ತು 2ನೇ ಎದುರುದಾರರು ಸದರಿ ಅಂದಾಜನ್ನು ತಯಾರಿಸಿದ್ದು, ಅದೇ ಮೊತ್ತಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮೈಸೂರು ವಿಭಾಗ ರವರು ತಾಂತ್ರಿಕ ಅನುಮೋದನೆಯನ್ನು ನೀಡಿದ್ದಾರೆ. ಸದರಿ ಕಾಮಗಾರಿಯ ಅಳತೆಯನ್ನು 2ನೇ ಎದುರುದಾರರು ದಾಖಲಿಸಿದ್ದಾರೆ. 2ನೇ ಎದುರುದಾರರು ಅಳತೆಯನ್ನು ದಾಖಲಿಸಿದ ದಿನಾಂಕ ಮತ್ತು ಪ್ರೀ–ಮೆಷರ್‌ಮೆಂಟನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿಲ್ಲ. ಅಂದಾಜು ಪಟ್ಟಿಯಲ್ಲಿನ ಅಂಶಗಳನ್ನೇ 2ನೇ ಎದುರುದಾರರು ಅಳತೆ ಪುಸ್ತಕದಲ್ಲಿ ದಾಖಲಿಸಿರುವುದು ಸ್ಪಷ್ಟವಾಗಿ ಕಂಡು ಬಂದಿದೆ. ಸದರಿ ಅಳತೆಯನ್ನು 1ನೇ ಎದುರುದಾರರು ಚೆಕ್ ಮೆಷರ್‌ಮೆಂಟ್

ಮಾಡಿದ್ದಾರೆ. ಸದರಿಯವರು ಚೆಕ್ ಮೆಷರ್‌ಮೆಂಟ್ ಮಾಡಿದ್ದಾರೆನ್ನುವ ಬಗ್ಗೆ "checked & found correct as in item No:1 to 4" ಎಂದು ನಮೂದಿಸಿ, ಸಹಿ ಮಾಡಿ, ದಿನಾಂಕವನ್ನು ನಮೂದಿಸಿರುವುದು ಕಂಡು ಬಂದಿದೆ. 2ನೇ ಎದುರುದಾರರು ಅಳತೆಯನ್ನು ದಾಖಲಿಸಿದ ದಿನಾಂಕವನ್ನು ಅಳತೆ ಪುಸ್ತಕದಲ್ಲಿ ನಮೂದಿಸದೇ ಇರುವುದರಿಂದ, ಸದರಿಯವರು ಕಾಮಗಾರಿಯ ಆಯಾಯ ಹಂತದಲ್ಲಿಯೇ ಅಳತೆಯನ್ನು ದಾಖಲಿಸಿದ್ದಾರೆಂದು ಹೇಳಲು ಸಾಧ್ಯವಿಲ್ಲ. ಆ ಕಾರಣಕ್ಕಾಗಿ, 1ನೇ ಎದುರುದಾರರು ನಮೂದಿಸಿದ ಚೆಕ್ ಮೆಷರ್‌ಮೆಂಟನ್ನು ನಂಬಲರ್ಹವಲ್ಲ;

7) ಸದರಿ ಎಲ್ಲಾ ಕಾಮಗಾರಿಗಳ ಮುಕ್ತಾಯದ ವರದಿ ಲಭ್ಯವಿಲ್ಲ. ಆದರೆ, ಸದರಿ ಕಾಮಗಾರಿಗಳ ಬಾಬ್ತು ಬಿಲ್ಲನ್ನು ಗುತ್ತಿಗೆದಾರರುಗಳಿಗೆ ನೀಡಲಾಗಿದೆಯೆಂದು ದೂರುದಾರರು ಮಾಹಿತಿ ಹಕ್ಕು ಕಾಯಿದೆ ಅಡಿ ಪಡೆದ ದಿನಾಂಕ:25/06/15ರ ಮಾಹಿತಿ ಪತ್ರದಲ್ಲಿ ಕಂಡು ಬಂದಿದೆ. ಕಾರಣ, ಹಿಂದಿನ ಖಂಡಿಕೆ–7(1)ರ ಕ್ರಮ ಸಂಖ್ಯೆ– ii ರಿಂದ v ಕಾಮಗಾರಿಗಳ ಅಳತೆ ಪುಸ್ತಕಗಳಲ್ಲಿ ಮೇಲೆ ಹೇಳಿದ ಲೋಪಗಳು ಕಂಡು ಬರುವುದರಿಂದ ಮತ್ತು ಸದರಿ ಕ್ರಮ ಸಂಖ್ಯೆ–i ರಿಂದ vರ ಕಾಮಗಾರಿಗಳಿಗೆ ಸಂಬಂಧಿಸಿದ ಮುಕ್ತಾಯದ ವರದಿಯನ್ನು ಹಾಜರುಪಡಿಸದೇ ಇರುವುದರಿಂದ, ಎಲ್ಲಾ ಲೋಪಗಳಿಗೆ ಆಯಾಯ ಎದುರುದಾರರುಗಳು ಜವಾಬ್ದಾರರಾಗಿ, ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

8. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 1 ರಿಂದ 3ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

9. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1 ರಿಂದ 3ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಟತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

10. ಅದಲ್ಲದೆ 1 ರಿಂದ 3ನೇ ಎದುರದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, 1

MYS/2473/15



ಮತ್ತು 3ನೇ ಎದುರುದಾರರು ಕ್ರಮವಾಗಿ, ದಿನಾಂಕ:31/05/2016 ಮತ್ತು 31/08/2017 ರಂದು ನಿವೃತ್ತಿ ಹೊಂದಿರುವುದರಿಂದ, **ಕೆಸಿಎಸ್‌ಆರ್ ನಿಯಮ** 214(2)(ಬಿ)(i)ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ ಹಾಗೂ 1 ರಿಂದ 3ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

11. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ, ಏಕೆಂದರೆ 1 ಮತ್ತು 3ನೇ ಎದುರುದಾರರು ಕ್ರಮವಾಗಿ ದಿನಾಂಕ:31/05/2016 ಮತ್ತು 31/08/2017ರಂದು ನಿವೃತ್ತಿ ಹೊಂದಿದ್ದಾರೆ.

N. Anand 16/4

**(ನ್ಯಾಯಾಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತ,**
**ಕರ್ನಾಟಕ ರಾಜ್ಯ.**

18/04.